ದಿನಾಂಕ 08-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಡಿ.ಜಿ.ಪಿ ಯವರಿಂದಃ

1. ನಾನು ಕುಂಜಾರುಗಿರಿಯಲ್ಲಿ ಹುಟ್ಟಿ ಬೆಳೆದಿದ್ದೇನೆ. ನಾನು ಮಠದಲ್ಲಿ ಇರಲಿಲ್ಲ, ಅದಮಾರಿನ ಪೂರ್ಣ ಪ್ರಜ್ಞ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದೇನೆ. ಯಾವ ಉದ್ದೇಶದಕ್ಕೆ ನೀವು ಸಾಕ್ಷಿಯಾಗಿ ಬಂದಿದ್ದು ಎಂದರೆ ಸಾಕ್ಷಿ ಅನಂತೇಶ್ವರ ದೇವಸ್ಥಾನ ಮತ್ತು ಕೃಷ್ಣ ಮಠದ ಪರಸ್ಪರ ಭಾಂದವ್ಯದ ಕುರಿತಂತೆ ತಿಳಿಸಲು ಬಂದಿದ್ದೇನೆ ಎನ್ನುತ್ತಾರೆ. ಕುಂಜಾರುಗಿರಿಯಿಂದ ಮಧ್ವಾಚಾರ್ಯರು ಹುಟ್ಟಿದ ಸ್ಥಳ 1 ಕಿ.ಮೀ ದೂರದಲ್ಲಿದೆ. ಈ ವ್ಯಾಜ್ಯವನ್ನು ಪುತ್ತಿಗೆ ಮಠದವರು ಮಾಡಿರುತ್ತಾರೆ. ಬೇರೆ ಯಾರೂ ವಾದಿಯರು ಇದ್ದಾರೆ ಎಂಬ ಮಾಹಿತಿ ನನಗೆ ಇಲ್ಲ. ನಾನು ಪೂರ್ಣ ಪ್ರಜ್ಞ ಕಾಲೇಜಿನಿಂದ ಪಿಂಚಣಿ ಪಡೆಯುತ್ತಿದ್ದೇನೆ. ಸದರಿ ಕಾಲೇಜು ಕೃಷ್ಣೆ ದೇವಸ್ಥಾನಕ್ಕೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ, ಅದು ಪೂರ್ಣ ಪ್ರಜ್ಞ ಎಜುಕೇಷನ್ ಸೊಸೈಟಿಗೆ ಸೇರಿರುತ್ತದೆ. ಅನಂತೇಶ್ವರ ದೇವಸ್ಥಾನ ಹಳೇಯ ದೇವಸ್ಥಾನ ಎಂದರೆ ಸರಿ. ಸದರಿ ಅನಂತೇಶ್ವರ ದೇವಸ್ಥಾನ ಊರಿಗೆ ಸಂಬಂದಪಟ್ಟಿದ್ದು ಎಂದರೆ ಸಾಕ್ಷಿ, ಒಂದು ಕಾಲದಲ್ಲಿ ಇರಬಹುದು ಎನ್ನುತ್ತಾರೆ. ಅನಂತೇಶ್ವರ ದೇವಸ್ಥಾನದ ಜೀರ್ಣೋದ್ದಾರ ಆಗುವಾಗ ಸಾರ್ವಜನಿಕರು ಹಣಕಾಸಿನ ಸಹಾಯ ಮಾಡುತ್ತಾರೆ ಎಂದರೆ ಸರಿ. ಕೃಷ್ಣನ ಮೂರ್ತಿ ಸಾಲಿಗ್ರಾಮ ಮೂರ್ತಿ ಇಲ್ಲಿ ಸ್ಥಾಪನೆಯಾದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಮಧ್ವಾಚಾರ್ಯರು ಕೃಷ್ಣನ ಮೂರ್ತಿಯನ್ನು ಸ್ಥಾಪನೆ ಮಾಡಿದ ಬಗ್ಗೆ ಮಧ್ವ ವಿಜಯದಲ್ಲಿ ಬರೆಯಲಾಗಿದೆ ಎನ್ನುತ್ತಾರೆ. ಮಧ್ವ ವಿಜಯದ ಬಗ್ಗೆ ಹಾಗೂ ಅದು ಸತ್ಯವೋ ಅಸತ್ಯವೋ ಎಂದು ವಿಮರ್ಶೆ ಮಾಡಲು ನಾರಾಯಣ ಪಂಡಿತರನ್ನು ಹೊರತುಪಡಿಸಿ ಬೇರೆಯವರಿಗೆ ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಅದನ್ನು ಓದಿದರೆ ತಿಳಿಯುತ್ತದೆ ಎನ್ನುತ್ತಾರೆ. ನಾರಾಯಣ ಪಂಡಿತರು ಮಧ್ವ ವಿಜಯವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ನಾನು ನಾರಾಯಣ ಪಂಡಿತರು ಸಂಸ್ಕೃತದಲ್ಲಿ ಬರೆದ ಮಧ್ವ ವಿಜಯವನ್ನು ಓದಿಲ್ಲ, ಅದರ ಕನ್ನಡ ತರ್ಜುಮೆಯನ್ನು ನಾನು ಓದಿರುತ್ತೇನೆ. ಗೋವಿಂದಾಚಾರ್ಯರು ಮಧ್ವ ವಿಜಯವನ್ನು ಕನ್ನಡದಲ್ಲಿ ತರ್ಜುಮೆ ಮಾಡಿರುತ್ತಾರೆ.

2. ಕೃಷ್ಣನ ಮೂರ್ತಿ ಇರುವ ದೇವಸ್ಥಾನದಲ್ಲಿ ಗೋಪಾಲ ಕೃಷ್ಣ ದೇವರು ಇತ್ತು ಎಂದರೆ ಸಾಕ್ಷಿ, ಗೋಪಾಲ ಕೃಷ್ಣ ಅಲ್ಲಿ ಇರಲಿಲ್ಲ, ಅದು ಇದ್ದದ್ದು ಆದಿ ಉಡುಪಿಯಲ್ಲಿ, ಅಲ್ಲಿ ಎಡವಟ್ಟು ಆದಾಗ ಜನ ಗೋಪಾಲ ಕೃಷ್ಣನನ್ನು ತಂದು ಕೃಷ್ಣ ಮಠದಲ್ಲಿ ಇಟ್ಟಿದ್ದರು. ಪುನಃ ಅಲ್ಲಿಗೇ ವಾಪಾಸು ಕೊಂಡೊಯ್ದಿದ್ದಾರೆ. ಕೃಷ್ಣನ ದೇವಸ್ಥಾನದಲ್ಲಿ ಮುಖ್ಯ ಪ್ರಾಣ ದೇವರು ಇದ್ದಾರೆ, ಅದನ್ನು ಸಾರ್ವಜನಿಕರು ಮುಖ್ಯ ಪ್ರಾಣ ಹಾಗೂ ಕೃಷ್ಣ ದೇವಸ್ಥಾನ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿ, ಅದು ಕೃಷ್ಣ ಮಠ ಎನ್ನುತ್ತಾರೆ. ನಾನು ಹೇಳುವ ಕೃಷ್ಣ ಮಠವನ್ನು ಕೃಷ್ಣನ ದೇವಸ್ಥಾನ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಘೋಷಿಸಿದಿದೆ ಎಂದರೆ ಸಾಕ್ಷಿ ನನ್ನ ಗಮನಕ್ಕೆ ಬಂದಿಲ್ಲ ಎನ್ನುತ್ತಾರೆ. ನಾನು ಮಧ್ವ ವಿಜಯದದ ಬಗ್ಗೆ ಹೇಳಲು ನಾನು ಅಸಮರ್ಥ ಎಂದರೆ ಸರಿಯಲ್ಲ, ಆದರೆ ನಾನು ಮಧ್ವ ವಿಜಯದ ಅಸಲು ಪ್ರತಿಯನ್ನು ಓದಿಲ್ಲ ಎನ್ನುತ್ತಾರೆ.

**ಮುಂದುವರಿದ ಪಾಟೀ ಸವಾಲುಃ** ವಕೀಲರ ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.